ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 1, March-April 2024, Pp. 23-27
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೇಡ ಸಮುದಾಯದ ಅಸ್ಮಿತೆ ಕೆಂಚವ್ವ ಕಾಮವ್ವ

**ರಮ್ಯಾ ಎನ್.ಆರ್**

ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಹೊಸಪೇಟೆ.

***Abstract:***

*"ಇತಿಹಾಸ ಮರೆತವರು ಇತಿಹಾಸ ಸೃಷ್ಠಿಸಲಾರರು" ಎಂಬ ಡಾ.ಬಿ.ಆರ್ ಅಂಬೇಡ್ಕರ್ ಅವರ ಹೇಳಿಕೆಯಂತೆ ಕಳೆದು ಹೋದ ನಿನ್ನೆಗಳನ್ನು ಮರೆತರೆ ಇಂದು ಹೇಗಿರಬೇಕು ಏನು ಮಾಡಬೇಕೆಂಬುದೇ ಗೋತ್ತಾಗದಿರಬಹುದು. ಚರಿತ್ರೆಯ ದಿನಗಳು ದೊಡ್ಡ ದೊಡ್ಡ ರಾಜರಿಗೆ ಅಷ್ಟೇ ಸಂಬಂಧಿಸಿಲ್ಲ ಜನ ಸಾಮಾನ್ಯನೂ ಚರಿತ್ರೆಯ ಭಾಗವೆಂದು ಈಚಿನ ಇತಿಹಾಸಕಾರರ ಒಲವು ಈ ನಿಟ್ಟಿನಲ್ಲಿ ಸ್ಥಳೀಯ ಚರಿತ್ರೆಗಳ ಅಧ್ಯಯನಕ್ಕೆ ಮಹತ್ವ ಬಂದಿದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಗೆ ತನ್ನದೆಯಾದ ಸ್ಥಾನವಿದೆ. ಮಹಿಳೆಯರ ಅಸ್ಮಿತೆ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಲಿಖಿತ ಹಾಗೂ ಮೌಖಿಕ ಚರಿತ್ರೆಯ ಬರಹಗಳಲ್ಲಿ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಬೇಡ ಸಮುದಾಯದ ಕೆಂಚವ್ವ ಮತ್ತು ಕಾಮವ್ವ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ಬುಡಕಟ್ಟು ಚರಿತ್ರೆ, ಬೇಡ ಸಮುದಾಯ, ಮಹಿಳೆಯರ ಅಸ್ಮಿತೆ, ಕೆಂಚವ್ವ ಕಾಮವ್ವ, ಗಾದರಿ ಪಾಲನಾಯಕ.*

## ಪೀಠಿಕೆ

ಸಂಸ್ಕೃತಿಯ ಬೆಳವಣಿಗೆ ಆದಿಯನ್ನು ಮಾನವ ಜೀವನದ ಆರಂಭ ಹಂತದಿಂದ ಗುರುತಿಸಲಾಗುವುದು. ಉಗಮದ ಮೂಲದಲ್ಲಿ ಗೆಡ್ಡೆ ಗೆಣಸುಗಳ ಮೂಲಕ ಆಹಾರವನ್ನು ಸಂಗ್ರಹಿಸಿ ಹಸಿವನ್ನು ನೀಗಿಸಿಕೊಳ್ಳುತ್ತಿದ್ದ ಮಾನವ ಕ್ರಮೇಣ ತನ್ನ ಆಹಾರಕ್ಕಾಗಿ ಪ್ರಾಣಿಗಳನ್ನು ವಧೆ ಮಾಡುವ ಕಲೆಯನ್ನು ಕಂಡು ಕೊಂಡ ಇದು ಬೇಟೆಯ ವೃತ್ತಿಯಾಗಿ ಕಲೆ–ಕ್ರೀಡೆಯಾಗಿ ವಿವಿಧ ಆಯಾಮಗಳಿಗೆ ರೂಪ ನೀಡಿತ್ತು. ನಂತರ ಹಲವು ಅವಶ್ಯಕತೆಗಳ ಕಾರಣಕ್ಕಾಗಿ ಪಶುಪಾಲನೆ ಒಂದು ವೃತಿಯಾಗಿ ಬೆಳೆದು ಬಂದಿದೆ. ಕುಲ, ಕುಟುಂಬ ವರ್ಗಗಳ ಮಧ್ಯೆ ಸಂಘರ್ಷಗಳು ಇವೆ. ಅದರ ಮೊದಲ ಬಲಿ ಮಹಿಳೆಯಾದರೂ ಅವಳಿಗೆ ತನ್ನದೇ ಆದ ಚರಿತ್ರೆ ಇದುವರೆಗೂ ದಾಖಲಾಗಿಲ್ಲ. ಅವಳ ವ್ಯಕ್ತಿತ್ವ ಅನ್ನುವುದು ಪುರುಷನ ಮೂಲಕ ಕಾಣಿಸಿಕೊಳ್ಳುತ್ತದೆ. ಅಂತಹ ಪರಂಪರೆಯಿಂದಲೂ ಬಂದಂತಹ ಮಹಿಳೆಯರ ಅಸ್ಮಿತೆಯನ್ನು ಗ್ರಹಿಸಬೇಕು. ಅದಕ್ಕಾಗಿ ಸಂಶೋಧನೆ ಲಿಖಿತ ಹಾಗೂ ಮೌಖಿಕ ಚರಿತ್ರೆಯ ಬರಹಗಳಲ್ಲಿ ಕೆಲವು ಮಹಿಳೆಯರ ಚರಿತ್ರೆಯನ್ನು ಹಾಗೂ ಘಟನಾವಳಿಗಳ ಮೂಲಕ ಅವರ ಸಂಸ್ಕೃತಿಯನ್ನು ಅರ್ಥಮಾಡಿ ಕೊಳ್ಳಲು ಸಾಧ್ಯ. ಬೇಡ ಸಮುದಾಯದಲ್ಲಿ ಮಹಿಳಾ ಸಂಸ್ಕೃತಿಯನ್ನು 3 ನೆಲೆಗಳಲ್ಲಿ ನಾವು ಗುರುತಿಸಬಹುದಾಗಿದೆ. (1) ವೃತ್ತಿಯಲ್ಲಿ ಮಹಿಳೆಯರ ಸಹಭಾಗಿತ್ವ, (2) ಕುಂಟುಂಬ ನಿರ್ವಹಣೆಯಲ್ಲಿ ಹೆಣ್ಣಿಗೆ ಇರುವ ಪ್ರಾತಿನಿಧ್ಯ ಹಾಗೂ (3)

***Please cite this article as:*** ರಮ್ಯಾ ಎನ್.ಆರ್. (2024). ಬೇಡ ಸಮುದಾಯದ ಅಸ್ಮಿತೆ ಕೆಂಚವ್ವ ಕಾಮವ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(1), 23–27.

ಸಮುದಾಯಗಳ ಮೌಖಿಕ ಕಥನಗಳಲ್ಲಿ ಹೆಣ್ಣಿನ ಪ್ರತಿನಿಧೀಕರಣ.

ಈ ಮೂರು ನೆಲೆಯಲ್ಲಿ ಬೇಡ ಸಮುದಾಯದ ಮಹಿಳಾ ಸಂಸ್ಕೃತಿಯನ್ನು ತಿಳಿಯಬಹುದು.

ಮ್ಯಾಸ ನಾಯಕರ ಪ್ರಕಾರ ಹೆಣ್ಣು ಮಕ್ಕಳು ಮನೆದೇವರು ಇದ್ದ ಹಾಗೆ, ಆಚರಣೆ ಸಂಪ್ರದಾಯಗಳಲ್ಲಿ ಮಹಿಳೆ ಕೇಂದ್ರಬಿಂದುವಾಗಿ ಕಾಣಿಸಿಕೊಳ್ಳುತ್ತಾಳೆ. ಪುರುಷನ ಮೂಲಕ ಮಹಿಳೆ ಕಾಣಿಸಿಕೊಳ್ಳುತ್ತಾಳೆ ಎನ್ನುವುದಕ್ಕಿಂತ ಪ್ರಕೃತಿ ಸಂಸ್ಕೃತಿ ನೆಲೆಯಲ್ಲಿ ಅವಳ ಹೆಜ್ಜೆ ಗುರುತುಗಳಿವೆ. ಬುಡಕಟ್ಟಿನಲ್ಲಿ ಕೆಲವರನ್ನೇ 'ಬೇಡ ಶರಣರು' ಎಂದು ಗುರುತಿಸುತ್ತಾರೆ. ಈ ಕೆಲವರಿಗೆ ಸಂಬಂಧಿಸಿದ ಆರಾಧನೆಗಳೇ ಸಮುದಾಯದ ಪ್ರಮುಖ ಸಾಂಸ್ಕೃತಿಕ ಆಚರಣೆಗಳೆನಿಸಿಕೊಂಡಿವೆ. ಆದರೆ ಈ ಪುರುಷರು 'ನಾಯಕ' ಸ್ಥಾನವನ್ನು ಪಡೆಯಲು ಕಾರಣಕರ್ತರಾದ ಮಹಿಳೆಯರನ್ನು ಬೇಡ ಬುಡಕಟ್ಟಿನ 'ಸಾಂಸ್ಕೃತಿಕ ನಾಯಕಿಯರು' ಎಂದು ಕರೆಯಬಹುದು. ಒಂದು ಬುಡಕಟ್ಟಿನ ಸಂಸ್ಕೃತಿಯನ್ನು ರಚಿಸುವಲ್ಲಿ ಆ ಗುಂಪಿನ ಪುರುಷರಷ್ಟೇ ಹೊಣೆಗಾರಿಕೆಯನ್ನು ಮಹಿಳೆಯೂ ಹೊಂದಿರುತ್ತಾಳೆ. ಪಶುಪಾಲಕರಲ್ಲಿ ಪುರಷನಿಗೆ ಸರಿ ಸಮಾನವಾಗಿ ನಿಂತು ದುಡಿದು ಹೈನುಗಾರಿಕೆಯನ್ನು ಮಾಡಿ ಸಮುದಾಯವನ್ನು ಪೋಷಿಸಿದ ಹಾಗೆಯೇ ಬಲಿದಾನ ಮಾಡಿದ ಸ್ತ್ರೀಯರೂ ಸಾಂಸ್ಕೃತಿಕ ನಾಯಕಿಯ ಸ್ಥಾನದಲ್ಲಿರಬೇಕಾದದ್ದು ಯೋಗ್ಯವಾದುದಾಗಿದೆ. ಸ್ತ್ರೀಯರೇ ಕಥನಗಳನ್ನು ಕಟ್ಟಿ ಹಾಡುವವರಾಗಿದ್ದರೂ ಪುರುಷನ ಅಧಿಕಾರದ ನೆರಳಿನಲ್ಲಿಯೇ ಬಾಳ ಬೇಕಾದ ಅನಿವಾರ್ಯತೆ ಕಾರಣವಾಗಿ ಅವರು ಅಲ್ಲಿಯ ಸ್ತ್ರೀಯರಿಗೆ ಪ್ರಧಾನ ಸ್ಥಾನ ಕೊಟ್ಟಿರಲಿಕ್ಕಿಲ್ಲ.

ನಾಯಕನಹಟ್ಟಿ ಪಾಳೇಯಗಾರರಲ್ಲಿ ಕಂಡು ಬರುವ ಮಲ್ಲಪ್ಪ ನಾಯಕನಿಗೆ ಸೂರದೇವಿನ ಪಾಪನಾಯಕ, ತೊರೆಲ ಮಲ್ಲನಾಯಕ ಮತ್ತು ಗಾದರಿ ಪಾಲನಾಯಕ ಎಂಬ ಮೂರು ಜನ ಗಂಡುಮಕ್ಕಳಿದ್ದರು. ಇವರಲ್ಲಿ ಗಾದರಿ ಪಾಲನಾಯಕ ಪಶುಪಾಲಕನಾಗಿದ್ದನು. ಇವನು ಬೇಡ ಬುಡಕಟ್ಟಿನಲ್ಲಿ ದನಗಾಹಿಯಾಗಿ ಅಪಾರ ಸೇವೆ ಸಲ್ಲಿಸಿದ ಕಾರಣ ಜನಮನದಲ್ಲಿ ಪುರಾಣಗಳಲ್ಲಿ ಇಂದಿಗೂ ಉಳಿದಿದ್ದಾನೆ. ಜನಮಾನಸದಲ್ಲಿ ಗಾದರಿ ಪಾಲನಾಯಕ ದೇವರಾಗಿ ಉಳಿದಿದ್ದಾನೆ. ಈ ಸಮುದಾಯದ ಜನರು ಕಾಡು ಮೇಡುಗಳಲ್ಲಿ ಅಲೆಯುತ್ತಾ ತಮ್ಮ ದನಕರುಗಳಿಗೆ ಮೇವು ನೀರು ಹುಡುಕುತ್ತಾ ದಟ್ಟವಾದ ಹುಲ್ಲುಗಾವಲು ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಇವರು ತಮ್ಮದೇಯಾದ ಪ್ರತ್ಯೇಕ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುತ್ತಿದ್ದರು.

ಹೀಗೆ ಒಂದು ದಿನ ಗಾದರಿ ಪಾಲನಾಯಕನು ಹುಲ್ಲು-ಮೇವು ಹರಸುತ್ತಾ ದೊಡ್ಡೇರಿ ಮಾರ್ಗವಾಗಿ ಹೊರಟು ಸೆಟ್ಟೂರು ಬಳಿಯ ಕಾವಲಿನಲ್ಲಿ ಬೀಡು ಬಿಡುತ್ತಾನೆ. ಈ ವಿಷಯ ತಿಳಿದ ಸೆಟ್ಟೂರು ಕಾವಲಿನ ಒಡೆಯ ಸೊಟ್ಟಯ್ಯ, ಪಾಲನಾಯಕನ ದನಗಳು ಹಾಗೂ ಪಾಲನಾಯಕನನ್ನು ಸೆರೆಹಿಡಿಯುತ್ತಾರೆ. ಈ ವಿಷಯ ತಿಳಿದ ಸೊಟ್ಟಯ್ಯನ ಮಗಳಾದ ಕಾಮವ್ವ ಪಾಲನಾಯಕನನ್ನು ನೋಡಲು ಬರುತ್ತಾಳೆ. ಅವರ ಮಧ್ಯೆ ಮಾತಿನ ಚಕಮಕಿ ನಡೆಯುತ್ತದೆ. ಗಾದ್ರಿ ಪಾಲನಾಯಕ ಕಾಮವ್ವಳನ್ನು ಕುರಿತು ತಮ್ಮ ದನಗಳನ್ನು ಸೆರೆಹಾಕಿದ್ದು ಏಕೆ ಎಂದು ಕೇಳಲು ಅದಕ್ಕೆ ಕಾಮವ್ವ ಈ ರೀತಿಯಾಗಿ ಹೇಳುತ್ತಾಳೆ.

***ಊರ ಸೂಳಿಗೆ ತಾಯಾರು ತಂಗ್ಯಾರು***
***ಊರಿಗೆ ದಾರಿ ಕದಿನರು ತಂದನ್ನಾನೋ***
***ಊರಿಗೆ ದಾರಿ ಕದಿನರು ಗೊಲ್ಲ ಗೌಡ***
***ನಿಮ್ಮ ಮುಂದೆ ಬೋರೆ ಕಾವೆ ತದಿನರು ತಂದನ್ನಾನೊ***

ಹೀಗೆ ಪಾಲನಾಯಕ ಮತ್ತು ಕಾಮವ್ವ ನಡುವೆ ಸಂವಾದ ನಡೆದು ಒಬ್ಬರಿಗೊಬ್ಬರು ನೋಡುತ್ತಾರೆ, ಪಾಲನಾಯಕನ ರೂಪಕ್ಕೆ ಮಾರು ಹೋದ ಕಾಮವ್ವ ತನ್ನ ತಂದೆಯನ್ನ ಒಪ್ಪಿಸಿ ಮದುವೆ ಮಾಡಿ ಕೊಳ್ಳುತ್ತಾಳೆ. ಮಗಳನ್ನು ಧಾರೆ ಎರೆದು ಕೊಟ್ಟ ನಂತರ ಪಾಲನಾಯಕನು ಚಿಕ್ಕಂದಿನಿಂದಲೂ

ತನಗೆಂದೆ ಹೆಸರಿಟ್ಟ ಸೋದರ ಮಾವನ ಮಗಳಾದ ನೆಲಗೇತಿ ಕುಲದ ಕೆಂಚವ್ವ ಎಂಬುವವಳನ್ನು 2ನೇ ಹೆಂಡತಿಯಾಗಿ ವರಿಸುತ್ತಾನೆ. ಇಬ್ಬರು ಹೆಂಡತಿಯರೊಂದಿಗೆ ಪಶುಪಾಲನೆ ಮಾಡಿ ಕೊಂಡಿರುತ್ತಾರೆ.

ಈತನು ಗೋಶಿಕೆರೆಯ ಬಳಿ ಪಶುಪಾಲನೆ ಮಾಡುತ್ತಿರುವಾಗ ತನ್ನ ಜೀವರಾಶಿಯನ್ನು ಮುಟ್ಟದಿರುವಂತೆ ಹುಲಿಯೊಂದಿಗೆ ಒಪ್ಪಂದ ಮಾಡಿಕೊಂಡಿರುತ್ತಾನೆ. ಒಂದು ಗಂಡು ಮತ್ತು ಹೆಣ್ಣು ಹುಲಿಗಳು ಗಾದರಿ ಪಾಲನಿಗೆ ನೀತಿಯನ್ನು ಹೇಳುತ್ತಾ ನಾವುಗಳು ವಾಸಿಸುವ ಅರಣ್ಯದಲ್ಲಿ ನೀನು ದನಕರುಗಳ ಸಮೇತ ನೆಲಸುವುದು ಕ್ಷೇಮವಲ್ಲ ಎಂದವಂತೆ ಅದಕ್ಕೆ ಗಾದರಿಪಾಲನಾಯಕನು ನಾ ಮಾಡಿದ ಅಪರಾಧವೇನೆಂದು ಕೇಳಿದಾಗ ಗಂಡು–ಹೆಣ್ಣು ಹುಲಿಗಳು ನಮಗೆ ಆಹಾರಕ್ಕೆ 2 ಹೋರಿ ಕರುಗಳನ್ನು ಕೊಡಬೇಕೆಂದವು. ತರುವಾಯ ಹೆಣ್ಣು ಹುಲಿ ಗಂಡು ಹುಲಿಗೆ, ನಮಗೂ ಮಕ್ಕಳುಂಟು ಆದರಿಂದ ನಾವು ದನಕರುಗಳನ್ನು ಆಹಾರವಾಗಿ ತಿನ್ನುವುದು ಬೇಡ ಇಬ್ಬರು ಪರಸ್ಪರ ಹೊಂದಿಕೊಂಡು ಹೋಗೋಣವೆಂದವು. ಅರಣ್ಯದಲ್ಲಿ ಒಪ್ಪಂದ ಮಾಡಿಕೊಂಡಂತೆ ತಾನು ಹುಲಿಯನ್ನು ಅದರ ಮಕ್ಕಳನ್ನು ಕೊಲ್ಲುವುದಿಲ್ಲ. ಹುಲಿ ತನ್ನ ಹಸುಕರುಗಳನ್ನು ಬೇಟೆಯಾಡಬಾರದೆಂದು ಒಪ್ಪಂದವಾಯಿತು. ಅವನ ಪತ್ನಿಯರಾದ ಕೆಂಚವ್ವ ಕಾಮವ್ವರಿಬ್ಬರೂ ಕರೆದ ಹಾಲನ್ನು ಹೆಪ್ಪು ಹಾಕಿ, ಮೊಸರು ಮತ್ತು ಮಜ್ಜಿಗೆ ಮಾಡಿ ಸೇವಿಸುತ್ತಿದ್ದರಲ್ಲದೆ, ಆದರಿಂದ ಹಾಲು ಮತ್ತು ಬೆಣ್ಣೆಯನ್ನು ತೆಗೆದು ಕೊಂಡು ಗಂಜಿಗಟ್ಟಿ ಹಳ್ಳಿ ಕಡೆ ಮಾರಿ ಬರಲು ಕೂಡಿ ಹೋಗುತ್ತಿದ್ದರು. ಭಾವನಾದ ಮೈದುನರಾದ ಚಿತ್ತಯ್ಯ ಮತ್ತು ಕಾಟಯ್ಯ ಮಿಂಚೇರಿಗೆ ಬಂದರು. ಮನೆಯಲ್ಲಿ ಯಾರು ಇಲ್ಲದಿರುವ ಸಂದರ್ಭದಲ್ಲಿ ಯಾರು ಕಾಟಣ್ಣ ಚಿತ್ತಣ್ಣ ದನದ ಗೂಡೊಳಗೆ ಬಂದು ಕರುಗಳ ಜೊತೆಯಲ್ಲಿ ಹುಲಿಮರಿಗಳು ಆಟ ಆಡುತ್ತಿರುವುದನ್ನು ನೋಡಿದರು. ಇವು ಇಷ್ಟು ಅನೂನ್ಯವಾಗಿರಲೂ ಸಾಧ್ಯವಿಲ್ಲವೆಂದು ಬೆಳೆದು ದೊಡ್ಡದಾದ ಮೇಲೆ ಕರುಗಳನ್ನು ಬಿಡುವುದಿಲ್ಲವೆಂದು ಬಂದೂಕಿನಿಂದ ಸಾಯಿಸಿಬಿಟ್ಟರು, ಇಂತಹ ಸಂದರ್ಭದಲ್ಲಿ ಪ್ರಶ್ನೆಯೊಂದು ಉದ್ಭವವಾಗುತ್ತದೆ.

ಬೇಟೆ, ಪಶುಪಾಲನೆಯ ಆರಂಭದ ಘಟ್ಟದಲ್ಲಿ ಬಂದೂಕಿನ ಬಳಕೆಯಾಗಿದ್ದು ಕಂಡು ಬರುವುದಿಲ್ಲ. ಇದನ್ನು ಕಂಡ ಗಾದರಿ ಪಾಲನಾಯಕನಿಗೆ ದಿಗ್ಭ್ರಮೆಯಾಯಿತು. ನಾನು ಹುಲಿಗಳಿಗೆ ಕೊಟ್ಟ ವಚನ ತಪ್ಪಿತೆಂದು ಅತೀವ ದುಃಖ ಪಡುತ್ತಾನೆ. ಆಗ ಹುಲಿ ತನ್ನನ್ನು ಬಿಡುವುದಿಲ್ಲವೆಂದು ಭಾವಿಸಿ ತನ್ನ ಜಾನುವಾರುಗಳನ್ನು ಮತ್ತು ಪತ್ನಿಯರೊಂದಿಗೆ ನನ್ನಿವಾಳದ ಕಟ್ಟೆಮನೆಯ ಮೂಲಕ ಗಾದರಿಗುಡ್ಡಕ್ಕೆ ಹೋಗುತ್ತಾನೆ ಅಲ್ಲಿ ಹುಲಿ ಮತ್ತು ಪಾಲನಾಯಕನ ನಡುವೆ ಭೀಕರ ಯುದ್ಧ ನಡೆದು ಗಾದರಿಪಾಲ ನಾಯಕ ಹೋರಾಡುತ್ತಾ ಮಡಿಯುತ್ತಾನೆ. ಇತ್ತಕಡೆ ಈತನ ಪತ್ನಿಯರಾದ ಕೆಂಚವ್ವ–ಕಾಮವ್ವರಿಬ್ಬರೂ ಕೂಡಿ ಹಾಲು ಬೆಣ್ಣೆ ಮಾರಲು ಗಂಜಿಗಟ್ಟಿ, ಕೋಗಲೂರು ಗ್ರಾಮಗಳಿಗೆ ಹೋಗಿ ಸಾಯಂಕಾಲದವರೆಗೆ ಪೂರೈಸಿಕೊಂಡು ಕಾಡಿನೊಳಗಿದ್ದ ಗೂಡಿನ ಹತ್ತಿರ ಬರುತ್ತಾರೆ. ಪಕ್ಕದಲ್ಲಿ ಹರಿಯುವ ಹಳ್ಳದಲ್ಲಿ ಇಳಿದು ಕೈಕಾಲು ಮುಖ ತೊಳೆದುಕೊಂಡು ನೀರು ಕುಡಿದು ದಣಿವನ್ನು ನೀಗಿಸಿಕೊಂಡು ಮುಂದೆ ಸಾಗೋಣವೆಂದು ನಿರ್ಧರಿಸುತ್ತಾರೆ. ದಾರಿಯಲ್ಲಿ ಬರುವಾಗ ಒಂದು ಚಿಲುಮೆಯ ಹತ್ತಿರ ಬರುತ್ತಾರೆ. ಅವರು ತೋಡಿದ ಚಿಲುಮೆಯೊಳಗೆ ನೀರು ಬರಲಿಲ್ಲ ರಕ್ತ ಚಿಮ್ಮುತ್ತಿತ್ತು. ಇದು ಅಪಶಕುನವೆಂದು ಅಕ್ಕ–ತಂಗಿಯರು ದನಗಳ ಗೂಡಿನ ಕಡೆ ಸರಸರನೆ ಬಂದಾಗ ಅಲ್ಲಿ ಹುಲಿಮರಿಗಳು ರಕ್ತಕಾರಿಕೊಂಡು ಬಿದ್ದಿದ್ದವುಗಳನ್ನು ನೋಡುತ್ತಾರೆ. ಅಕ್ಕ–ತಂಗಿಯರಿಬ್ಬರು ಏನೋ ಅನಾಹುತ ಸಂಭವಿಸಿದೆ ಎಂದು ತಿಳಿಯುವಾಗ ಸುತ್ತ ಮುತ್ತ ಎಲ್ಲಾ ಕಡೆ ಅಪಶಕುನಗಳ ಸರಮಾಲೆ ಕಾದಿದ್ದವು. ಚಿತ್ತಯ್ಯ, ಕಾಟಣ್ಣ ಬಂದು ಗಾದರಿಪಾಲನಾಯಕ ತೀರಿಕೊಂಡ ಸಂಗತಿಯನ್ನು

ತಿಳಿಸಿದರು. ಗಂಡ ತೀರಿಕೊಂಡ ಮೇಲೆ ಈ ಭೂಮಿಯ ಮೇಲೆ ಬದುಕಿ ಸಾರ್ಥಕವೇನು ಎಂದುಕೊಂಡು ಚಿಂತಕ್ರಾಂತರಾದರು. 3ನೇ ದಿನ ಮಿಂಚೇರಿಯ ಅದೇ ಹಳ್ಳದಲ್ಲಿ ಪತಿಯ ಸಮಾಧಿಗೆ ಪೂಜೆ ಮಾಡಿ ಗಂಜಿಗಟ್ಟೆಯಲ್ಲಿ ಸಹಗಮನವನ್ನು ಮಾಡುತ್ತಾರೆ. ಗಾದರಿ ಪಾಲನಾಯಕನನ್ನು ಮ್ಯಾಸಬೇಡ ಜನಾಂಗದ ಪ್ರಥಮ ಸಾಂಸ್ಕೃತಿಕ ವೀರನೆಂದು ಗುರುತಿಸಲಾಗಿದೆ. ಈತನ ಹೆಂಡತಿಯರನ್ನು ಸಾಂಸ್ಕೃತಿಕ ನಾಯಕಿಯರನ್ನಾಗಿ ಗುರುತಿಸಿದ್ದಾರೆ.

ಸಮುದಾಯದಲ್ಲಿ ಇಂದಿಗೂ ಕೆಂಚವ್ವ– ಕಾಮವ್ವರ ಬಗ್ಗೆ ಲಾವಣಿಗಳನ್ನು ಕಟ್ಟಿ ಹಾಡುತ್ತಾರೆ.

*ಅಂದನೂರು ಗಂಜೀಗಟ್ಟಿ ರಂಬೇರು ಮಜ್ಜಿಗೆ ಮಾರಿ*
*ಕಂದವಡಂಬೋ ಕಣೀಮ್ಯಾಗೆ॥ಕಾಮವ್ವ*
*ಗಂಡಾನಾ ಸುದ್ದಿ ನೆರೀವಾಳೆ॥ಸೋಬಾನವೇ॥*

*ಅಂದನೂರು ಗಂಜೀಗಟ್ಟಿ ರಯರು ಮಜ್ಜಿಗೆ ಮಾರೀ*
*ಹಾಲಾವಾಡಂಬೋ ಕಣೀಮ್ಯಾಗೆ॥ಕಂಚ್ಚವ್ವ*
*ರಾಯಾನಾ ಸುದ್ದಿ ನೆರೀವಾಳೆ॥ಸೋಬಾನವೇ॥*

*ಓಣ್ಯಾಗೇ ಕಾಮವ್ವ ನ್ಯಾರನ್ನ ಹೆಂಗೂಸ*
*ನೀರಿಗೋದೇಳೇ ಬರಲಿಲ್ಲ॥ಗಂಜೀಗಟ್ಟೀ॥*
*ಓಣ್ಯಗೆ ಕಾಮವ್ವ ಮಯಾವಾಗೆ ॥ಸೋಬಾನವೇ॥*

*ಅಟ್ವಾಗಿ ಕಾಮವ್ವ ಗುಟ್ಟನ್ನು ಹೆಂಗೂಸಾ*
*ಕುಟ್ಟ ಕೋದೋಳೇ ಬರಾಲಿಲ್ಲ॥ಗಂಜೀಗಟ್ಟೀ॥*
*ಅಟ್ಟ್ಯಗೆ ಕಾಮವ್ವ ಮಯವಾಗೆ॥ಸೋಬಾನವೇ॥*

ಹೀಗೆ ಜನಪದರ ಹಾಡುಗಳಲ್ಲಿ ಅಲ್ಲಿನ ಸಂದರ್ಭವನ್ನು ವಿವರಿಸುವುದನ್ನು ಕಾಣಬಹುದಾಗಿದೆ.

ಗಾದರಿ ಪಾಲನಾಯಕನ ಕಥನ ಪಿತೃಪ್ರಧಾನ ದೃಷ್ಟಿಕೋನವುಳ್ಳದ್ದಾಗಿದ್ದು ಇಂತಹ ಚರಿತ್ರೆಯನ್ನು ಯಾವುದೇ ಸ್ತ್ರೀವಾದ ನಿರಾಕರಿಸುತ್ತದೆ. ಪಿತೃಪ್ರಧಾನ ಕಥನಗಳಲ್ಲಿ ಮಹಿಳೆಯನ್ನು ಗುರುತಿಸುವ ಪ್ರಯತ್ನ ಮಾಡಬೇಕಾಗಿದೆ. ಇಂತಹ ಪ್ರಯತ್ನದ ಮಾರ್ಗವಾಗಿ ಗಾದರಿ ಪಾಲನಾಯಕನ ಕಥನವನ್ನು ಸೂಕ್ಷ್ಮವಾಗಿ ಗಮನಿಸುವ ಪ್ರಯತ್ನ ಮಾಡಿದಾಗ ಅಲ್ಲಿಯ ಸ್ತ್ರೀಮುಖಗಳನ್ನು ಶೋಷಣೆಯ ನೆಲೆಗಳನ್ನು ಕಾಣಲು ಸಾಧ್ಯವಾಗುತ್ತದೆ. ಪಾಲನಾಯಕ ಪಶುಸಂಪತ್ತಿನ ರಕ್ಷಕರಾದರೆ ಗುಂಪಿನ ಅವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿ ಹೊತ್ತವರು ಆತನ ಪತ್ನಿಯರು, ಪಶುಪಾಲಕನಾದ 'ಗಾದರಿ ಪಾಲನಾಯಕ'ನಾದ ಆದರೆ ಪಶುಪಾಲಕಿಯರು? ಅದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಪುರುಷನನ್ನು ಕುಟುಂಬದ ಪ್ರಮುಖ ಸ್ಥಾನದಲ್ಲಿರಿಸಿದ್ದಾಗ್ಯೂ ಮಹಿಳೆ ಆ ಪುರುಷನಿಗೆ ಸರಿಸಮಾನಳಾಗಿ ಕೆಲವೊಮ್ಮೆ ಅವನಿಗಿಂತಲೂ ಅಧಿಕ ದುಡಿಮೆಯನ್ನು ಆಕೆ ಮಾಡುವುದುಂಟು. ವಿವಾಹದ ಮೂಲಕ ಹೆಣ್ಣಿನ ಮೇಲೆ ಪುರುಷ ತನ್ನ ಹಕ್ಕನ್ನು ಸ್ಥಾಪಿಸುತ್ತಾನೆ. ಅವನ ನಂತರವು ಇದು ಮುಂದುವರಿಯುತ್ತದೆ. ಪ್ರಭುತ್ವದ ನೆರಳಿನಲ್ಲಿಯೇ ಬಾಳಬೇಕಾದ ಅವಳು ಆತ ಇಲ್ಲವಾದಾಗ ಆತನೊಂದಿಗೆ ಸಹಗಮಿಸಬೇಕು. ಇಲ್ಲಿ ಕೆಂಚವ್ವ ಕಾಮವ್ವ ಮಾಡಿದ್ದು ಹಾಗೆಯೇ. ಬುಡಕಟ್ಟು ಸಮುದಾಯದಲ್ಲಿ ಇಲ್ಲದೇ ಇದ್ದ ಈ ಪದ್ಧತಿ ಅನ್ಯ ಸಂಸ್ಕೃತಿಯ ಪ್ರಭಾವದಿಂದ ಆಗಿದೆಯೇ ಹೊರತು ತನ್ನಿಂದಾಗಿಯೇ ಆಗಿದ್ದಲ್ಲ. ಸಮುದಾಯದಲ್ಲಿ ಈತನ ಪತ್ನಿಯರನ್ನು ಆ ನೆಲೆಯಲ್ಲಿ ಗೌರವಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಪಶುಪಾಲಕ ಸಮುದಾಯವೊಂದರಲ್ಲಿ ಆ ಸಮುದಾಯಕ್ಕೆ ಅಲ್ಲಿನ ಮಹಿಳೆಯರ ಕೊಡುಗೆ ಯಾವ ರೀತಿಯಾಗಿರುತ್ತಿತ್ತು ಎಂಬುದಕ್ಕೆ ಇವರು ಉದಾಹರಣೆಯಾಗುತ್ತಾರೆ.

**ಆರಾಧನಾ ಸ್ಥಳ**

ಗಂಜಿಗಟ್ಟೆಯಲ್ಲಿ ದೇವಾಲಯದ ಗರ್ಭಗುಡಿ ಯಲ್ಲಿರುವ ಕೆಂಚವ್ವ, ಕಾಮವ್ವ ಮಾಸ್ತಿಗಲ್ಲನ್ನು ಗಾದರಿ ಪಾಲನಾಯಕನೆಂದು ಕರೆಯುವುದುಂಟು. ಮೇಲಿನ ಗ್ರಾಮದ ಗಾದರಿ ಪಾಲನಾಯಕ ದೇವರ ಪೂಜಾರಿಯ ಹೆಸರು ರಾಮಚಂದ್ರಪ್ಪ ಇವರ ಅಭಿಪ್ರಾಯ ಕೆಂಚವ್ವ, ಕಾಮವ್ವ ನವರು ಕಾಮಗೇತಿ

ಮನೆತನದ ಹೆಣ್ಣು ಮಕ್ಕಳೂ ಎನುಮ್ಮೂಲರು ಬೆಡಗಿನವರು ಇವರನ್ನು ಪೂಜೆ ಮಾಡುವುದಿಲ್ಲ, ತವರು ಮನೆಯವರು ಪೂಜಿಸುವುದು ಕಂಡುಬರುತ್ತದೆ.

**ಡಿಕ್ಕಿ ಆಚರಣೆ**

ಡಿಕ್ಕಿ ಆಚರಣೆಯಲ್ಲಿ ದೊರೆಗಳವರ ಕುಟುಂಬದ ಹೆಂಡತಿಯರು ಹಾಗೂ ಅವರಿಗೆ ವರೆಸೆಯಲ್ಲಿ ನೆಂಟರಾಗಬಹುದಾದ ಬಂಗಾರು ದೇವರ ಪೂಜಾರಿಯ ಹೆಣ್ಣು ಮಕ್ಕಳು ಮಾತ್ರ ಭಾಗವಹಿಸುತ್ತಾರೆ. ಈ ಆಚರಣೆ ನಡೆಯಲು ಕಾರಣ ಬಂಗಾರು ದೇವರಿಗೆ ತೆಂಗಿನ ಕಾಯಿ ಹೊಡೆಯುವುದಿಲ್ಲ, ಏಕೆಂದರೆ ಗಾದರಿ ಪಾಲನಾಯಕನ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊರಟ ಹುಲಿಗಳಲ್ಲಿ ಮೊದಲು ಗಂಡು ಹುಲಿ ನೀರಿಗೆ ಇಳಿದು ಪ್ರವಾಹದಲ್ಲಿ ಸಾಯುತ್ತದೆ, ಹಾಗೆಯೇ ಹೆಣ್ಣು ಹುಲಿಯು ಪಾಲನಾಯಕನೊಂದಿಗೆ ಯುದ್ಧ ಮಾಡಿ ಸಾವಿನ ಅಂಚು ತಲುಪಿ ಬಾಯಿಗೆ ಹಾಕಿದ ಜನ್ನಿಗೆ ಹಾಲನ್ನು ಕುಡಿಯದೇ ಗಂಟಲಿನಲ್ಲಿ ಇಟ್ಟುಕೊಂಡು ಸಾಯುತ್ತದೆ. ಈ ಎರಡು ಘಟನೆಗಳಲ್ಲಿ ಹುಲಿಗಳು ಒಂದು ನೀರು ಕುಡಿದು ಸತ್ತರೆ, ಮತ್ತೊಂದು ದ್ರವ ರೂಪದ ಹಾಲನ್ನು ಕುಡಿಯದೇ ಗಂಟಲಿನಲ್ಲಿಟ್ಟುಕೊಂಡು ಸಾಯತ್ತದೆ. ಆದ್ದರಿಂದ ಹುಲಿಯ ರೂಪದ ಬಂಗಾರೂ ದೇವರಿಗೆ ತೆಂಗಿನ ಕಾಯಿ ನಿಷಿದ್ಧ. ಹೆಣ್ಣು ಮಕ್ಕಳು ತಲೆಗೆ ತಲೆಗೆ ಡಿಕ್ಕಿ ಹೊಡೆದುಕೊಳ್ಳುವ ಮೂಲಕ ಹರಕೆ ತೀರಿಸಿಕೊಳ್ಳುತ್ತಾರೆ.

**ಪರಾಮರ್ಶನ ಗ್ರಂಥಗಳು**


- ಅನ್ನಪೂರ್ಣಮ್ಮ. (2007). *ಮ್ಯಾಸ ಬೇಡರ ಸಾಂಸ್ಕೃತಿಕ ನಾಯಕಿಯರು: ಒಂದು ಅಧ್ಯಯನ.* ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ.
- ಅರುಣ ಜೋಳದ ಕೂಡ್ಲಿಗಿ. (2009). *ಬೇಡತಿಯರು ಸಮುದಾಯದೊಳಗಿನ ಸಂಘರ್ಷ.* ***ಈ ಗ್ರಂಥದಲ್ಲಿ,*** ಮಂಜುನಾಥ ಬೇವಿನಕಟ್ಟಿ (ಸಂ.). *ವಾಲ್ಮೀಕಿ ಸಮುದಾಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಧರಣೇಂದ್ರಯ್ಯ, (2015). *ಮ್ಯಾಸಬೇಡರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ.* ಅಪ್ರಕಟಿತ ಮಹಾಪ್ರಬಂಧ. ಕುವೆಂಪು ವಿಶ್ವವಿದ್ಯಾಲಯ.
- ನಾಗರತ್ನ ಬಿ. (2019). *ಮೈಸೂರು ಜಿಲ್ಲೆಯ ಬುಡಕಟ್ಟು ಮಹಿಳೆಯರ ಸಂಸ್ಕೃತಿ.* ಪ್ರಕಟಿತ ಮಹಾಪ್ರಬಂಧ. ಮೈಸೂರು ವಿಶ್ವವಿದ್ಯಾಲಯ.
- ರೇಖಾ ಎಸ್.ಟಿ. (2009). *ವಾಲ್ಮೀಕಿ ಸಮುದಾಯದ ಮಹಿಳೆಯರ ಸ್ಥಿತಿಗತಿಗಳು.* ***ಈ ಗ್ರಂಥದಲ್ಲಿ,*** ಮಂಜುನಾಥ ಬೇವಿನಕಟ್ಟಿ (ಸಂ.). ವಾಲ್ಮೀಕಿ ಸಮುದಾಯ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸಿದ್ದಪ್ಪ ಎಂ.ಬೆಳಗಟ್ಟಿ. (2008). *ಕರ್ನಾಟಕದ ಬೇಡರ ಬುಡಕಟ್ಟು ಮಹಿಳೆ: ಸಾಂಸ್ಕೃತಿಕ ವಿಶ್ಲೇಷಣೆ.* ***ಈ ಗ್ರಂಥದಲ್ಲಿ,*** ಹರ್ತಿಕೋಟೆ ವೀರೇಂದ್ರ ಸಿಂಹ ಮತ್ತು ಅಮರೇಶ ಯತಗಲ್ (ಸಂ.). ವಾಲ್ಮೀಕಿ ಮಂದಾರ. ವಾಲ್ಮೀಕಿ ಸಾಹಿತ್ಯ ಸಂಪದ.
- ವಿರೂಪಾಕ್ಷಿ ಪೂಜಾರಹಳ್ಳಿ. (2002). *ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವಿರುಪಾಕ್ಷಿ ಪೂಜಾರಳ್ಳಿ. (2008). *ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ವಿರೂಪಾಕ್ಷಿ ಪೂಜಾರಹಳ್ಳಿ. (2010). ಬೇಡ ನಾಯಕ ಬುಡಕಟ್ಟಿನಲ್ಲಿ ಸತಿಪದ್ಧತಿ: ಅವಲೋಕನ. *ಚರಿತ್ರೆ ಅಧ್ಯಯನ.* 5(2).